**O.S**. 62/2016

ಪಿ ಡಬ್ಲ್ಯೂ- 1

<u>ಸಾಕ್ಷಿಯನ್ನು ದಿಃ 26.10.2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು 1, 2 ಹಾಗೂ 4 ನೇ ಪ್ರತಿವಾದಿಗಳ ಪರ ಶ್ರೀ ಬಿ ಎಲ್ ಎಸ್ ವಕೀಲರಿಂದಃ</u>**

ನಾನು ಚಿನ್ನ ಬೆಳ್ಳಿ ವ್ಯಾಪಾರ ಮಾಡುವುದರಿಂದ ನನ್ನ ಬಳಿ 16 ಲಕ್ಷ ರೂಪಾಯಿ ನನ್ನ ಬಳಿ ಇತ್ತು. ನಮ್ಮ ಪ್ರತಿನಿತ್ಯದ ವ್ಯವಹಾರದ ಬಗ್ಗೆ ನೀವು ಲೆಕ್ಕ ಪತ್ರ ಇಟ್ಟುಕೊಳ್ಳುತ್ತೀರಿ ಎಂದರೆ ಸಾಕ್ಷಿ ಇಟ್ಟುಕೊಳ್ಳುತ್ತೇವೆ ಆದರೆ ಸಂಪೂರ್ಣ ಲೆಕ್ಕ ಇಟ್ಟುಕೊಳ್ಳುವುದಿಲ್ಲ ಎಂದು ಉತ್ತರಿಸುತ್ತಾರೆ. ಉಪನೋಂದಣಾಧಿಕಾರಿಗಳ ಕಛೇರಿಗೆ ಹೋದ ದಿನ ನನ್ನ ಬಳಿ ರೂ.16 ಲಕ್ಷ ಹಣ ಇತ್ತು ಎಂದು ಹೇಳಲು ನಮ್ಮ ಅಂಗಡಿಯಲ್ಲಿ ದಾಖಲೆ ಇಲ್ಲ. ಆ ದಿನ ನನ್ನ ಬಳಿ ಅಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-14 ರ ಕರಾರು ಪತ್ರದ ಅನ್ವಯ ನಾನು ಪ್ರತಿವಾದಿಗಳಿಗೆ ರೂ 14 ಲಕ್ಷ ಹಣ ಕೊಡಬೇಕಾಗಿತ್ತು. ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕದ ಬಾಬ್ತು ಎಷ್ಟು ಹಣ ಪಾವತಿಸಬೇಕು ಎನ್ನುವುದನ್ನು ನಾನು ಆ ದಿನ ತಿಳಿದುಕೊಂಡಿಲ್ಲ. ಈ ನ್ಯಾಯಾಲಯದಲ್ಲಿ ಹಾಗೂ ಹಿರಿಯೂರಿನ ಸಿವಿಲ್ ನ್ಯಾಯಾಲಯದಲ್ಲಿ ನಾನು ಹೂಡಿದ ಚೆಕ್ ಕೇಸ್ ಗಳು ಇವೆ ಎಂದರೆ ಸರಿಯಲ್ಲ.

ರೂ.5 ಲಕ್ಷದ 30 ಸಾವಿರ ಹಣವನ್ನು ನಾನು 1 ನೇ ಪ್ರತಿವಾದಿಗೆ ಕೊಟ್ಟಿದ್ದೇನೆಂದು ಹೇಳಿದ್ದು ಆ ಹಣ ನಿಮ್ಮ ಬಳಿ ಎಲ್ಲಿಂದ ಬಂತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನ್ನ ತಾಯಿ ಕೊಟ್ಟಿದ್ದಾರೆಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ತನ್ನ ವ್ಯವಹಾರದಿಂದ ಹಣ ಬಂದಿತ್ತು ಎಂದು ಉತ್ತರಿಸುತ್ತಾರೆ. ನಾನು ರೂ.5 ಲಕ್ಷದ 30 ಸಾವಿರ ಹಣ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು ಚಿನ್ನ ಬೆಳ್ಳಿ ವ್ಯಾಪಾರ ಮಾಡುವುದರಿಂದ ನನಗೆ ವ್ಯವಹಾರದ ಬಗ್ಗೆ ಗೊತ್ತಿದೆ ಎಂದರೆ ಸರಿ.

ರೂ.20 ಸಾವಿರಕ್ಕಿಂತ ಹೆಚ್ಚಿನ ವ್ಯವಹಾರ ಮಾಡಬೇಕಾದರೆ ಆ ವ್ಯವಹಾರವನ್ನು ಚೆಕ್ ಅಥವಾ ಡಿ ಡಿ ಮುಖಾಂತರವೇ ಮಾಡಬೇಕು ಎನ್ನುವುದು ನಿಮಗೆ ಗೊತ್ತಿದೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾಸ್ತಿ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ, ಅದನ್ನು ಹೊರತು ಪಡಿಸಿ ಅವರಿಗೆ ಬೇರೆ ಆಸ್ತಿ ಇಲ್ಲ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

1 ನೇ ಪ್ರತಿವಾದಿ ವ್ಯವಸಾಯದಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾಸ್ತಿಯನ್ನು ಹೊರತು ಪಡಿಸಿ ಪ್ರತಿವಾದಿಗಳಿಗೆ ಬೇರೆ ಆಸ್ತಿಗಳು ಇವೆಯೇ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಕೃಷಿಯೇ ಜೀವನ ನಿರ್ವಹಣೆಗೆ ಇರುವ ಒಂದು ದಾರಿಯಾಗಿದೆ, ಅದನ್ನು ಬಿಟ್ಟು ಅವರಿಗೆ ಯಾವುದೇ ಆದಾಯವಿಲ್ಲ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಹಾಗೂ ಪ್ರತಿವಾದಿಗಳ ನಡುವೆ ದಾವಾಸ್ತಿಯನ್ನು ಖರೀದಿಸುವ ಹಾಗೂ ಮಾರಾಟ ಮಾಡುವ ಯಾವುದೇ ವ್ಯವಹಾರವಾಗಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಕೊಟ್ಟ ಹಣದ ಭದ್ರತೆಗಾಗಿ ನಿಪಿ–14 ರ ಕರಾರು ಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಪಡೆದ ಹಣಕ್ಕೆ ಮಾಸಿಕ ಶೇ.1 ರಂತೆ ಬಡ್ಡಿ ಕೊಡಲು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ನಾನು ಹಣದ ಭದ್ರತೆಗಾಗಿ ನಿಪಿ.14 ನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಮುಗ್ದತೆ ಹಾಗೂ ಆರ್ಥಿಕ ಸ್ಥಿತಿಯನ್ನು ದುರ್ಬಳಕೆ ಮಾಡಿಕೊಂಡು ಕರಾರು ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ರೂ.5 ಲಕ್ಷ ಹಣವನ್ನು ಪ್ರತಿವಾದಿಗಳು ವಾಪಸ್ಸು ಕೊಡಲು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ

ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ಕೊಂಡುಕೊಳ್ಳಲು ಯಾವತ್ತೂ ಸಿದ್ಧನಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.